ಸಾಕ್ಷಿಯನ್ನು ದಿಃ 17-06-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್ ಎ ಪಿ ವಕೀಲರಿಂದ (ಅರ್ಜಿದಾರರ ಪರವಾಗಿ)**

1 ನೇ ಎದುರುದಾರ ನನ್ನ ಸೋದರತ್ತೆ ಮಗ. ಮುಖ್ಯ ವಿಚಾರಣೆ ನಾನೇ ಹೇಳಿ ಬರೆಯಿಸಿದ್ದೇನೆ. ಅಪಘಾತವನ್ನು ನಾನು ನೋಡಿಲ್ಲ ಹಾಗಾಗಿ ಅಪಘಾತದ ಬಗ್ಗೆ ಪ್ರತ್ಯಕ್ಷ ಮಾಹಿತಿ ಇಲ್ಲ. ಅಪಘಾತದ ಬಗ್ಗೆ 1 ನೇ ಎದುರುದಾರ ನನಗೆ ಮಾಹಿತಿ ನೀಡಿದ್ದಾರೆ. ಮೋಟಾರ ಸೈಕಲ್ ಹಾಗೂ ಟ್ರಾಕ್ಟರ ನಡುವೆ ಅಪಘಾತ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಟಾರ್ ಸೈಕಲ್ ಸವಾರ ಕುಡಿದ ನಿಶೆದಲ್ಲಿ ಅಪಘಾತ ಮಾಡಿದ್ದಾನೆ ಎಂದು ಎದುರುದಾರ ನನಗೆ ಹೇಳಿದ್ದಾನೆ. ಅರ್ಜಿದಾರ ಮಧ್ಯಪಾನ ಮಾಡಿ ಮೋಟಾರ ಸೈಕಲ್ ಚಲಾಯಿಸಿ ಅಪಘಾತಪಡಿಸಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನೊಂದಿಗೆ ನಾನು ದೂರು ಸಲ್ಲಿಸಲು ಹೋಗಿಲ್ಲ ಮತ್ತು ಎದುರುದಾರನಿಗೆ ಪೊಲೀಸರು ಏನು ಹೇಳಿದ್ದಾರೆ ಎಂದು ಗೊತ್ತಿಲ್ಲ. ಈ ಕೇಸಿನ ಬಗ್ಗೆ, ಎದುರರುದಾರ ದೂರು ಸಲ್ಲಿಸಿದ ಬಗ್ಗೆ, ಪೊಲೀಸ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ. ಅರ್ಜಿದಾರರಿಗೆ ಪರಿಹಾರ ನೀಡಲು ಎದುರುದಾರರು ಬಾಧ್ಯಸ್ಥರಾಗಿದ್ದು, ಅವರನ್ನು ಪರಿಹಾರ ನೀಡುವ ಜವಾಬ್ದಾರಿಯಿಂದ ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.